OS No.151/2021 PW-1

**<u>ದಿನಾಂಕ 30.08.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ ಃ</u>**

1 ನೇ ಪ್ರತಿವಾದಿ ನನ್ನ ಅಣ್ಣನ ಮಗ ಎಂದರೆ ಸರಿಯಲ್ಲ. ನಾನು ಸಾಲದ ವ್ಯವಹಾರ ಮಾಡುವುದಿಲ್ಲ. ದಿಃ01.09.2020 ರಂದು ಸದರಿ ಅಗ್ರಿಮೆಂಟ್ ಅನ್ನು ತಯಾರಿಸಲಾಗಿದೆ . ಸದರಿ ಅಗ್ರಿಮೆಂಟ್ ಅನ್ನು ದಿಃ01.09.2020 ರ ಹಿಂದಿನ ದಿನ ಸದರಿ ಅಗ್ರಿಮೆಂಟ್ ಅನ್ನು ಬೆರಳಚ್ಚು ಮಾಡಿಸಿರುತ್ತೇವೆ. ಸದರಿ ಅಗ್ರಿಮೆಂಟ್ ಆದ ದಿನ ನಾನು ಹಣವನ್ನು ಚೆಕ್ ಮುಖಾಂತರ ಕೊಟ್ಟಿರುತ್ತೇನೆ. ಸದರಿ ಚೆಕ್ಕಿನ ನಂಬರ್ ನನಗೆ ನೆನಪಿಲ್ಲ. ಸದರಿ ಅಗ್ರಿಮೆಂಟ್ ನಲ್ಲಿ ಚೆಕ್ ನಂಬರ್ ಅನ್ನು ನಮೂದಿಸಿರುತ್ತೇನೆ. ಸದರಿ ಚೆಕ್ ನಂಬರ್ 440446 ಎಂದರೆ ಹೌದು. ನಾನು ನೀಡಿದಂತಹ ಚೆಕ್ ನ ಜೆರಾಕ್ಸ್ ಪ್ರತಿ ಈಗ ನನಗೆ ತೋರಿಸುತ್ತಿರುವ ದಾಖಲೆಯಾಗಿರುತ್ತದೆ. ಸದರಿ ಚೆಕ್ ನಲ್ಲಿ ಒಂದು ಸಣ್ಣ ತಿದ್ದು ಪಡಿ ಮಾಡಿರುವ ಬಗ್ಗೆ ನನ್ನ ಸಣ್ಣ ಸಹಿಯನ್ನು ಹಾಕಿರುತ್ತೇನೆಂದರೆ ಹೌದು. ಸದರಿ ಚೆಕ್ ಅನ್ನು ದಿಃ 02.09.2020 ರಂದು ನೀಡಿರುತ್ತೇನೆಂದು ನಮೂದಿಸಲಾಗಿದೆ. ಈಗ ನನಗೆ ತೋರಿಸುತ್ತಿರುವ ಬುಕ್ ನಲ್ಲಿ ಇರುವ ಸಣ್ಣ ಸಹಿ ನನ್ನದಲ್ಲ. ನಾನು ಸದರಿ ಅಗ್ರಿಮೆಂಟ್ ಅನ್ನು ಮಾಡಿಕೊಳ್ಳುವ ಕಾಲಕ್ಕೆ 1 ನೇ ಪ್ರತಿವಾದಿಗೆ ಸಂಬಂದಪಟ್ಟ ಮೂಲ ಅಸಲು ಪತ್ರವನ್ನು ನೋಡಿ ಪರಿಶೀಲನೆ ಮಾಡಿರುತ್ತೇನೆ. ಸದರಿ ಅಸಲು ಪತ್ರ ಎಂದರೆ ವಿಭಾಗ ಆದ ಪತ್ರ. ಆ ಸಮಯದಲ್ಲಿ ನಾನು ಆರ್ ಟಿಸಿಯನ್ನು ನೋಡಿಲ್ಲ. ನಾನು ಸಾಲದ ಭದ್ರತೆಗಾಗಿ ದಾಖಲೆಯನ್ನು ಮಾಡಿಕೊಂಡಿದ್ದರಿಂದ ನಾನು ಆರ್ ಟಿ ಸಿ ಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆ ಉದ್ದೇಶದಿಂದಲೇ ನಾನು ಚೆಕ್ ಅನ್ನು ಅಗ್ರಿಮೆಂಟ್ ಆದ ಮರುದಿನ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಅಗ್ರಿಮೆಂಟ್ ಆದ ಸಮಯದಲ್ಲಿ ಕೋವಿಡ್ 19 ಇತ್ತು ಎಂದರೆ ಹೌದು. ಆ ಸಮಯದಲ್ಲಿ ನಾನು 10 ಲಕ್ಷಕ್ಕೆ ಶೇಕಡಾ 2 ರಂತೆ ಬಡ್ಡಿ ತೆಗೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಅಗ್ರಿಮೆಂಟ್ ಗಿಂತ ಮುಂಚೆಯೇ ನಾನು ಸದರಿ ಹಣಕ್ಕೆ ಶೇಕಡಾ 2 ರಂತೆ ಬಡ್ಡಿ

ತೆಗೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಅಗ್ರಿಮೆಂಟ್ ಆದ 2 ವರ್ಷದ ಒಳಗೆ ಕ್ರಯ ಪತ್ರ ಮಾಡಿಸಿಕೊಳ್ಳುವ ಬಗ್ಗೆ ಕರಾರಾಗಿರುತ್ತದೆ. ಸದರಿ ಅಗ್ರಿಮೆಂಟ್ ಮಾಡಿಸಿಕೊಳ್ಳುವ ಸಮಯದಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅಗ್ರಿಮೆಂಟ್ ಆದ ನಂತರ ಪ್ರತಿವಾದಿಯವರಿಗೆ ಕ್ರಯ ಪತ್ರ ಬರೆದುಕೊಡಿ ಎಂದು ನಾನು ಖುದ್ದಾಗಿ ಬೇಟಿಯಾಗಿ ಕೇಳಿರುತ್ತೇನೆ. ನಾನು ಗೋವಿಂದರಾಜುರವರ ಮುಖಾಂತರ ಒಂದೇ ಬಾರಿಗೆ ಹೋಗಿ 1 ನೇ ಪ್ರತಿವಾದಿಯ ಬಳಿ ಕೇಳಿರುತ್ತೇನೆ. ನಾನು ದಿಃ 06.02.2021 ರಂದು ನೋಟೀಸ್ ಅನ್ನು ಕಳುಹಿಸಿರುತ್ತೇನೆ. ನಾನು ಕಳುಹಿಸಿದಂತಹ ನೋಟೀಸ್ ನಲ್ಲಿ 1 ನೇ ಪ್ರತಿವಾದಿ ಸಾಲ ಪಡೆದುಕೊಂಡಿರುತ್ತಾರೆಂದು ತಿಳಿಸಿಲ್ಲ. ಸದರಿ ನೋಟೀಸ್ ಪ್ರತಿವಾದಿಯರಿಗೆ ತಲುಪಿತ್ತು ಎನ್ನುವ ಬಗ್ಗೆ ಖಚಿತಪಡಿಸಿಕೊಂಡಿರುತ್ತೇನೆ. ಅದಕ್ಕೆ ಸಂಬಂದಪಟ್ಟಂತೆ ಅಂಚೆ ರಶೀದಿ ಮತ್ತು ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿರುತ್ತೇನೆ. ದಿಃ06.02.2021 ರಂದು ಕಳುಹಿಸಿದ ನೋಟೀಸ್ ಪ್ರತಿವಾದಿಯವರಿಗೆ ತಲುಪಿಲ್ಲ ಆ ಬಗ್ಗೆ ನಾನು ಯಾವುದೇ ಅಂಚೆ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ನಾನು ಮೂಲತಃ ಇದೇ ಊರಿನವರು. ನನಗೆ 1 ನೇ ಪ್ರತಿವಾದಿಯ ಆಸ್ತಿಗಳ ಬಗ್ಗೆ ಪರಿಚಯವಿದೆ ಎಂದರೆ ಹೌದು. ನಾನು ದಿಃ15.09.2021 ರಂದು ನೋಟೀಸ್ ಕಳುಹಿಸಿರುತ್ತೇನೆ. ನಾನು ಕಳುಹಿಸಿದಂತಹ 2 ನೋಟೀಸ್ ಗಳು ಕನ್ನಡದಲ್ಲಿಯೇ ಇದ್ದವು. ನಾನು 2 ನೇ ಬಾರಿಗೆ ಕಳುಹಿಸಿದಂತಹ ನೋಟೀಸ್ ಕನ್ನಡದಲ್ಲಿದ್ದು ಸದರ ನೋಟೀಸ್ ತಲುಪಿದ ನಂತರ ನಾವು ನಿಮ್ಮಿಂದ ಸಾಲ ಮಾತ್ರ ಪಡೆದುಕೊಂಡಿರುತ್ತೇವೆ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶವಿಲ್ಲ ಯಾಕೆ ನೋಟೀಸ್ ಕಳುಹಿಸಿದ್ದೀರಿ ಎಂದು 1 ನೇ ಪ್ರತಿವಾದಿ ನನ್ನನ್ನು ಕೇಳಿರುತ್ತಾರೆಂದರೆ ಸರಿಯಲ್ಲ. ಆನಂತರ ನಾನು 1 ನೇ ಪ್ರತಿವಾದಿ ನೀವು ಬೇಗ ಹಣ ಕೊಡಲಿ ಎಂದು ನೋಟೀಸ್ ಕೊಟ್ಟಿರುತ್ತೇನೆ ಅದರಿಂದ ನಿಮಗೆ ಏನೂ ತೊಂದರೆ ಆಗುವುದಿಲ್ಲ ಎಂದು ಸಮಜಾಯಿಸಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಈ ವಿಚಾರಕ್ಕೆ ನಾನು ಬಡ್ಡಿ ಹಣ ಕೊಡಲಿಲ್ಲ ಎಂದು 1 ನೇ ಪ್ರತಿವಾದಿಗೆ ಪದೇ ಪದೇ ಫೋನ್ ಕರೆ ಮಾಡುತ್ತಿದ್ದೆ ಆ ಬಗ್ಗೆ ನ್ಯಾಯ ಪಂಚಾಯಿತಿ ಕೂಡ ಆಗಿತ್ತು ಎಂದರೆ ಸುಳ್ಳು. ಸದರಿ ನ್ಯಾಯ ಪಂಚಾಯಿತಿಯಲ್ಲಿ ನನ್ನ ಫೋನ್ ಕರೆ ಮಾಡಿದಂತಹ

ರೆಕಾರ್ಡ್ ನ ಬಗ್ಗೆ ಪ್ರಸ್ತಾಪ ವಾಗಿರುತ್ತದೆಂದರೆ ಸುಳ್ಳು. ನಾನು ಮಾಡಿಸಿಕೊಂಡ ಅಗ್ರಿಮೆಂಟ್ ನಲ್ಲಿರುವ ಆಸ್ತಿ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ಸದರಿ ಆಸ್ತಿ ಮುಖ್ಯ ರಸ್ತೆಯ ಪಕ್ಕದಲ್ಲಿಯೇ ಇದೆ ಎಂದರೆ ಹೌದು. ಸದರಿ ಆಸ್ತಿಯ ಬೆಲೆ 25 ಲಕ್ಷಕ್ಕಿಂತ ಮೇಲ್ಪಟ್ಟು ಇದೆ ಎಂದರೆ ಸುಳ್ಳು. ಸದರಿ ಅಗ್ರಿಮೆಂಟ್ ಆದ ನಂತರ 1 ನೇ ಪ್ರತಿವಾದಿಯವರು ಸದರಿ ಜಮೀನಿಗೆ ಬೋರ್ ವೆಲ್ ಹಾಕಿಸಿರುತ್ತಾರೆಂದರೆ ಹೌದು. ಬೋರ್ ವೆಲ್ ಹಾಕಿಸಿದ ನಂತರ 1 ನೇ ಪ್ರತಿವಾದಿಯವರು ಒಂದು ಹೊಸ ಮನೆಯನ್ನು ಕಟ್ಟಿಸಿರುತ್ತಾರೆಂದರೆ ಆ ಜಾಗದಲ್ಲಿ ಅಲ್ಲ ತಮಗಾಗಿ ಬಿಟ್ಟುಕೊಂಡಿದ್ದ ಜಾಗದಲ್ಲಿ ಮನೆಯನ್ನು ಕಟ್ಟಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಇನ್ನು ಉಳಿದ ಜಾಗದಲ್ಲಿ ಹೋಟೆಲ್ ಮತ್ತು ಅಂಗಡಿಯನ್ನು ತೆರೆದಿರುತ್ತಾರೆಂದರೆ ಹೌದು. 1 ನೇ ಪ್ರತಿವಾದಿಯವರು ಮನೆ ಕಟ್ಟಿಸಲು ಮತ್ತು ಹೋಟೆಲ್ ಅನ್ನು ತೆರೆಯಲು ನನ್ನಿಂದ ಸಾಲ ಪಡೆದುಕೊಂಡಿದ್ದರು ಎಂದರೆ ಸುಳ್ಳು. ಅಗ್ರಿಮೆಂಟ್ ಆದ ಸಮಯದಲ್ಲಿ ಸಾಲ ಬೇಕಾದರೆ ನಿಮ್ಮ ಮಕ್ಕಳನ್ನೂ ಕೂಡ ಕರೆದುಕೊಂಡು ಬರಬೇಕು ಎಂದು ಹೇಳಿದ್ದರಿಂದ 1 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆಂದರೆ ಸಾಕ್ಷಿ ಸಾಲಕ್ಕಾಗಿ ಅಲ್ಲ ಅಗ್ರಿಮೆಂಟ್ ಗಾಗಿ ಎಂದು ನುಡಿಯುತ್ತಾರೆ. ಸದರಿ ಅಗ್ರಿಮೆಂಟ್ ಸಾಲದ ಭದ್ರತೆಗಾಗಿ ಮಾತ್ರ ಬರೆದುಕೊಟ್ಟಿದ್ದು ಆಸ್ತಿಯ ಮಾರಾಟಕ್ಕಾಗಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತಪ್ಪು ಮಾಹಿತಿಯನ್ನು ನೀಡಿ ವಂಚಿಸಿ ಸುಳ್ಳು ಅಗ್ರಿಮೆಂಟ್ ಅನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ದಿಃ01.09.2020 ಕ್ಕೆ  ಯಾವುದೇ ಹಣವನ್ನು ನೀಡಿರಲಿಲ್ಲ ಎಂದರೆ ಚೆಕ್ ನೀಡಿದ್ದೆ ಎಂದು ನುಡಿಯುತ್ತಾರೆ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ಶುಭಾ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**